ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

15

ಇಲಾಖೆ / ವಿಷಯ : DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE 24/10/2018

# 2021ರಿಂದ ಕನ್ನಡದಲ್ಲೂ ಜೆಇಇ ಪರೀಕ್ಷೆಗೆ ಅವಕಾಶ

## ಹಿಂದಿ, ಇಂಗ್ಲಿಷ್, ಗುಜರಾತಿಯಲ್ಲಿ ಮಾತ್ರ ಇದ್ದ ಪರೀಕ್ಷೆ

ನವದೆಹಲಿ: ದೇಶದ ಸರ್ಕಾರಿ ಎಂಜಿನಿಯರಿಂಗ್ ಮತ್ತು ಆರ್ಕಿಟೆಕ್ಚರ್ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸುವ ಜೆಇಇ (ಜಂಟಿ ಪ್ರವೇಶ ಪರೀಕ್ಷೆ) ಪರೀಕ್ಷೆಗಳನ್ನು ಇನ್ನು ಮುಂದೆ ಕನ್ನಡದಲ್ಲೂ ಬರೆಯಬಹುದು. ಇದರಿಂದಾಗಿ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಪರೀಕ್ಷೆ ಬರೆಯಲು ಸಮಸ್ಯೆ ಎದುರಿಸುವವರಿಗೆ ಭಾರಿ ಅನುಕೂಲವಾಗಲಿದೆ.



ಇಂಗ್ಲಿಷ್, ಹಿಂದಿ ಹಾಗೂ ಗುಜರಾತಿಯಲ್ಲಿ ಮಾತ್ರ ಜೆಇಇ ಪರೀಕ್ಷೆ ಬರೆಯಲು ಹಾಲಿ ಅವಕಾಶವಿದ್ದು, 2021ರ ಜನವರಿಯಿಂದ ಹೊಸದಾಗಿ ಕನ್ನಡ ಸೇರಿ 8 ಭಾಷೆಗಳಿಗೆ ಅವಕಾಶ ನೀಡುವಂತೆ ಪರೀಕ್ಷೆ ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಸೂಚನೆ ನೀಡಿದೆ. ಹೀಗಾಗಿ ಕನ್ನಡ, ಅಸ್ಸಾಮಿ, ಬಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಮರಾಠಿ, ಒಡಿಯಾ, ತಮಿಳು, ತೆಲುಗು ಹಾಗೂ ಉರ್ದುವಿನಲ್ಲಿ ಇನ್ನು ವಿದ್ಯಾರ್ಥಿಗಳು ಪರೀಕ್ಷೆ ಬರೆಯಬಹುದಾಗಿದೆ.

ಎನ್‌ಐಟಿ, ಐಐಐಟಿ ಹಾಗೂ ಇನ್ನಿತರೆ ಸರ್ಕಾರಿ ಅನುದಾನಿತ ತಾಂತ್ರಿಕ ಕಾಲೇಜುಗಳ ಪ್ರವೇಶಕ್ಕೆ ಜೆಇಇ ನಡೆಸಲಾಗುತ್ತದೆ. ಐಐಟಿಗಳ ಪ್ರವೇಶಕ್ಕಾಗಿ ನಡೆಸಲಾಗುವ ಜೆಇಇ (ಅಡ್ವಾನ್ಸ್ಡ್)ಗೂ ಇದು ಅರ್ಹತಾ ಪರೀಕ್ಷೆಯಾಗಿದೆ.